ಮತ್ತು ಅಲ್ಲಿರತಕ್ಕಂತಹ intake students ಗೆ ಅನುಗುಣವಾಗಿ ನಾವು ಮಾಡಿದ್ದೇವೆ. ಮತ್ತು ಯಾವುದೇ ರೀತಿಯ ಉಪನ್ಯಾಸಕರ ಕೊರತೆ ಇಲ್ಲದ ಹಾಗೆ ಹೊಸ ಕಾಲೇಜಿರಬಹುದು, ಹಳೆಯ ಕಾಲೇಜಿರಬಹುದು ನಾವು ಕ್ರಮ ತೆಗೆದುಕೊಳ್ಳುತ್ತವೆ ಎನ್ನತಕ್ಕಂಥಾದ್ದನ್ನು ನಾನು ತಮ್ಮ ಮೂಲಕ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿ. ಸೋಮಣ್ಣ :– ಹೊಸ ಕೋರ್ಸ್‌ಗಳನ್ನು ತಾವು ಏನು ತಂದಿದೀರಿ, ಅದನ್ನು ಹಳೆಯ ಕಾಲೇಜುಗಳಿಗೆ ಕೂಡ ಅಳವಡಿಸಿ.

ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿ ಪಡಿಸುವುದು

375 (2195) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾಲಯಗಳಿವೆ (ಜಿಲ್ಲಾವಾರು ವಿವರ ನೀಡುವುದು);

ಆ) ಆರ್ಥಿಕ ತೊಂದರೆಯಿಂದ ಅವುಗಳ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ ಕಳೆದ ಮೂರು ವರ್ಷಗಳ ಆಯವ್ಯಯದಲ್ಲಿ ಕೊರತೆಯಿರುವುದು ನಿಜವೇ; (ವಿವರ ನೀಡುವುದು)

ಈ) ಹಾಗಿದ್ದಲ್ಲಿ, ವಿಶ್ವವಿದ್ಯಾಲಯವು ಸರ್ಕಾರಕ್ಕೆ ಕೇಳಿದ್ದ ಅನುದಾನವೆಷ್ಟು ಹಾಗೂ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು (ಮೂರು ವರ್ಷಗಳ ವಿವರ ನೀಡುವುದು)

ಉ) ಅನುದಾನ ಕಡಿಮೆ ಬಿಡುಗಡೆಯಿಂದಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ತೊಂದರೆಯಾಗಿರುವುದರಿಂದ ಅದರ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಈ ಕೆಳಕಂಡ ವಿಶ್ವವಿದ್ಯಾಲಯಗಳು ಬರುತ್ತವೆ.

ಕ್ರ.ಸಂ.	ವಿಶ್ವವಿದ್ಯಾಲಯ	ಕೇಂದ್ರ ಸ್ಥಳ
1	ಬೆಂಗಳೂರು ವಿಶ್ವವಿದ್ಯಾಲಯ	ಬೆಂಗಳೂರು
2	ತುಮಕೂರು ವಿಶ್ವವಿದ್ಯಾಲಯ	ತುಮಕೂರು
3	ಮೈಸೂರು ವಿಶ್ವವಿದ್ಯಾಲಯ	ಮೈಸೂರು

4	ಕುವೆಂಪು ವಿಶ್ವವಿದ್ಯಾಲಯ	ಶಂಕರಘಟ್ಟ, ಶಿವಮೊಗ್ಗ,
5	ಕರ್ನಾಟಕ ವಿಶ್ವವಿದ್ಯಾಲಯ	ಧಾರವಾಡ
6	ಗುಲ್ಬರ್ಗಾ ವಿಶ್ವವಿದ್ಯಾಲಯ	ಗುಲ್ಬರ್ಗಾ
7	ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ	ಬಿಜಾಪುರ
8	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ	ಬೆಳಗಾವಿ
9	ಕನ್ನಡ ವಿಶ್ವವಿದ್ಯಾಲಯ	ಹಂಪಿ, ಬಳ್ಳಾರಿ ಜಿಲ್ಲೆ
10	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ	ಮೈಸೂರು
11	ಮಂಗಳೂರು ವಿಶ್ವವಿದ್ಯಾಲಯ	ಮಂಗಳೂರು

ಆ) ಇಲ್ಲ

ಇ), ಈ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ.

ವರ್ಷ	ವಿಶ್ವವಿದ್ಯಾಲಯವು ಸಲ್ಲಿಸಿದ ಪ್ರಸ್ತಾವನೆ	ಸರ್ಕಾರದಿಂದ ಮಂಜೂರಾದ ಅನುದಾನ (ಲಕ್ಷಗಳಲ್ಲಿ)
2004–05	4966–20	3379–10
2005–06	5077–00	3681–15
2006–07	4224–04	3725–56

ಉ) ರಾಜ್ಯದ ವಾರ್ಷಿಕ ಆಯವ್ಯಯದ ಚರ್ಚೆಯ ಸಮಯದಲ್ಲಿ ಆರ್ಥಿಕ ಇಲಾಖೆಯು ಪ್ರತಿ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿ ಗತಿಯ ಪರಿಸ್ಥಿತಿಯನ್ನು ಗಮನಿಸಿ ಅನುದಾನವನ್ನು ನಿಗದಿಗೊಳಿಸಲಾಗುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ :– ಸನ್ಮಾನ್ಯ ಛೇರ್ಮನ್‌ರೇ, ಉತ್ತರಗಳನ್ನು ಒದಗಿಸಿದ್ದಾರೆ, 11 ವಿಶ್ವವಿದ್ಯಾಲಯಗಳಿವೆ, ಆರ್ಥಿಕ ತೊಂದರೆಯಿಂದ ಅವುಗಳ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ನೇರವಾಗಿ ಇಲ್ಲವೆಂದು ಹೇಳಿದ್ದೀರಿ. ಎಲಾ ಯೂನಿವರ್ಸಿಟಿಗಳು ಹಣಕಾಸಿನ ತೊಂದರೆಯಿಂದ ಅಭಿವೃದ್ಧಿಯಾಗಿಲ್ಲ. ಇದರಲ್ಲೇನು ಸಂಶಯವಿಲ್ಲ. ನಾನು ಕರ್ನಾಟಕ

ವಿಶ್ವವಿದ್ಯಾನಿಲಯದ ಬಗ್ಗೆ ಕೇಳಿದೆ. ಎಲ್ಲಾ ಯೂನಿವರ್ಸಿಟಿಗಳ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ನನಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಅಕೆಡಮಿಕ್ ಕೌನ್ಸಿಲ್‌ಗೆ ಕಳುಹಿಸಿರುವುದರಿಂದ ಅಲ್ಲಿ ನಾನು ನೋಡಿದೆ, ತಾವು ಇಲ್ಲಿ 4,996 ಲಕ್ಷ ರೂಪಾಯಿಗಳ ಪ್ರಸ್ತಾವನೆಯನ್ನು ಅವರಿಗೆ ಕಳುಹಸಿದ್ದರೆ, 3379 ಲಕ್ಷ ರೂಪಾಯಿಗಳನ್ನು ನೀವು ಮಂಜೂರು ಮಾಡಿದ್ದೀರಿ. ಮಂಜೂರು ಮಾಡಿರುವುದು ಬೇರೆ, ನಾನು ಬಿಡುಗಡೆಯಾದ ಹಣವನ್ನು ಕೇಳಿದ್ದೇನೆ. ಅಷ್ಟೂ ಬಿಡುಗಡೆಯಾಗಿಲ್ಲ. ಮತ್ತು ವರ್ಷದ ಕೊನೆಯಲ್ಲಿ ಒಂದು ಕೋಟಿ, ಎರಡು ಕೋಟಿ ಬಿಡುಗಡೆ ಮಾಡಿದ್ದಾರೆ. ಐದು ಕೋಟಿ ಬಜೆಟ್‌ನಲ್ಲಿ ಎರಡು ಕೋಟಿ ಕಟ್ ಮಾಡಿ ಬಿಟ್ಟರೆ ಅವರು ನಡೆಸುವುದು ಹೇಗೆ? ಮೊನ್ನೆ ನಾನು ಕರ್ನಾಟಕ ಯೂನಿವರ್ಸಿಟಿಯ ಅಕೆಡೆಮಿಕ್ ಕೌನ್ಸಿಲ್‌ನಲ್ಲಿ ಕುಳಿತು ಎಲ್ಲಾ ನೋಡಿದೆ. ಎಲ್ಲಾ ಗೆಸ್ಟ್ ಲಕ್ಚರರ್ಸ್ ಇದ್ದಾರೆ. 2,000–3,000 ಕೊಟ್ಟು ಆ ಲಕ್ಚರರ್ಸ್‌ಗಳಿಂದ ದುಡಿಸಿಕೊಳ್ಳುತ್ತಾರೆ. ಅವರು ಎಷ್ಟರ ಮಟ್ಟಿಗೆ ಮಾಡಬಹುದು? ಆ ಕಾರಣದಿಂದ ಈ ಎಲ್ಲಾ ಯೂನಿವರ್ಸಿಟಿಗಳಿಗೆ ಮೊದಲಿನ ಯೂನಿವರ್ಸಿಟಿಗಳೆಲ್ಲವೂ ಇನ್ನು ಮೇಲೆ ಆರ್ಟ್ಸ್ ಯೂನಿವರ್ಸಿಟಿಗಳಾಗಿ ಉಳಿಯುತ್ತವೆ ಅಷ್ಟೇ ಅವು. ಬೇರೆ ಬೇರೆ ಪ್ರಾರಂಭ ಮಾಡಿದ್ದೀರಿ. ಇವೇ ಸರಿ ಇಲ್ಲ. ಮತ್ತೆ ಒಂದು ನಾಲ್ಕೈದು ಯೂನಿವರ್ಸಿಟಿಗಳನ್ನು ತೆಗೆಯುವುದಕ್ಕೆ ಹೊರಟಿದ್ದೀರಿ. ಆ ಕಾರಣದಿಂದ ಹಿಂದಿನ ಎಲ್ಲಾ ಯೂನಿವರ್ಸಿಟಿಗಳಿಗೆ ಹಣಕಾಸಿನ ತೊಂದರೆಯಾಗದ ಹಾಗೆ ನೋಡಿಕೊಂಡು, ಅಲ್ಲಿ ಎಲ್ಲಾ ಗೆಸ್ಟ್ ಲಕ್ಚರರ್ಸ್ ಮತ್ತು ಗೆಸ್ಟ್ ಟೀಚರ್ಸ್ ಇದ್ದಾರೆ. ಮೊನ್ನೆ ತಮ್ಮ ಪರವಾಗಿ ಹೊರಟ್ಟಿಯವರು ಉತ್ತರ ಕೊಟ್ಟರು. ಆ ಯೂನಿವರ್ಸಿಟಿಗೆ ನಿಮ್ಮ High school ಒಂದೇ ಒಂದು ಇದೆ. ಅವರಿಗೆಲ್ಲ ನಿಮಗಿದೆ ಇದು. ಈ Girs High School ಹಿಂದೆ ಎಷ್ಟು ಚೆನ್ನಾಗಿತ್ತು, ಇವತ್ತು ಅದನ್ನು ಈ ಪರಿಸ್ಥಿತಿ ಮಾಡಿ ಇಟ್ಟಿದ್ದೀರಿ. ಅದಕ್ಕೋಸ್ಕರ ದಯವಿಟ್ಟು ಈ ಎಲ್ಲಾ ಯೂನಿವರ್ಸಿಟಿಗಳಿಗೆ ಆರ್ಥಿಕ ತೊಂದರೆ ಇಲ್ಲದ ಹಾಗೆ ನೋಡಿ, ಅವನ್ನೆಲ್ಲಾ ಸರಿಯಾಗಿ ಮಾಡುತ್ತಾರಾ ಎಂದು ನನಗೆ ಹೇಳಬೇಕು. ಅದರಲ್ಲಿಯೂ ಕರ್ನಾಟಕ ಯೂನಿವರ್ಸಿಟಿಗೆ ಬಜೆಟ್‌ನಲ್ಲಿ ಇಟ್ಟಂತಹ ಹಣ ಸಂಪೂರ್ಣವಾಗಿ ಬಿಡುಗಡೆ ಮಾಡುತ್ತೀರಾ ಎಂದು ನಾನು ಅಧ್ಯಕ್ಷರ ಮುಖೇನ ತಮಗೆ ಕೇಳುತ್ತಿದ್ದೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಛೇರ್ಮನ್‌ರೇ, ಹಿರಿಯರು ಹೇಳಿದಂತಹ ಮಾತು ನಿಜ. ಗಮನಕ್ಕೆ ಬಂದಿದೆಯೇ ಎಂದರೆ, ಇಲ್ಲ. ಇದು ಸರಿ ಉತ್ತರ ಇದೆ. ಇದು ಉತ್ತರ ಸರಿಯೋ ತಪ್ಪೋ ಎಂದು ಅವರು ಸ್ವಲ್ಪ ಬೇಸರದಿಂದ ಹೇಳಿದರು. ಆರ್ಥಿಕ ತೊಂದರೆ ಇದ್ದೇ ಇರುತ್ತದೆ. ಅದರಿಂದ ಬಳಲುತ್ತಿದ್ದಾರಾ ಎಂದರೆ ಇಲ್ಲ. ಕಾರಣವೇನೆಂದರೆ, ಅವರು ಹೇಳಿದ ಅಂಕಿ ಅಂಶಗಳು 2004–05ಕ್ಕೆ ಸಂಬಂಧಪಟ್ಟವು. ಇವು ನಮ್ಮ ಸರ್ಕಾರ ಬಂದ ನಂತರದ ಅಂಕಿ ಅಂಶಗಳು ಅಲ್ಲ. ಹಾಗಾದರೆ ನಮ್ಮ

ಸರ್ಕಾರ ಬಂದ ಮೇಲೆ ಪೂರ್ತಿ ಅವರು ಕೇಳಿದಾಗಲೆಲ್ಲಾ ಕೊಟ್ಟಿದ್ದೇವಾ? ಇಲ್ಲ. ಆದರೆ ಎಲ್ಲಾ ಯೂನಿವರ್ಸಿಟಿಗಳಿಗೂ ಅಂತರಿಕವಾಗಿ ಸಂಪನ್ಮೂಲ ಕ್ರೂಡೀಕರಣ ಮಾಡಿಕೊಳ್ಳುವುದಕ್ಕೋಸ್ಕರ ಒಂದು ಅವಕಾಶ ಕೊಟ್ಟಿದ್ದೇವೆ. ಕೆಲವು ಯೂನಿವರ್ಸಿಟಿಗಳು ತುಂಬ ಚೆನ್ನಾಗಿ ಮಾಡಿಕೊಂಡಿವೆ. ಜೊತೆಗೆ UGC ಯಿಂದ ಅವರಿಗೆ grants ಬರುತ್ತವೆ. ಆದರೆ ಒಂದು ನಿಜ, ನಾವು ಏನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ, ಅದು ಮೂರು ಕೋಟಿ ಇರಬಹುದು, ಐದು ಕೋಟಿ ಇರಬಹುದು, ಎರಡು ಕೋಟಿ ರೂಪಾಯಿಗಳಿರಬಹುದು, ಅದೂ ಬಿಡಗಡೆ ಆಗಲಿಲ್ಲ ಎನ್ನತಕ್ಕಂತಹ ಕೂಗು ಕೆಲವು ಕಡೆ ಇದೆ. ಕೆಲವು ಕಡೆಗೆ ಆ ಕೂಗು ಇಲ್ಲ. ಹೆಚ್ಚಿಗೆ ಏನು ಕೊಟ್ಟಿದ್ದೇವೆ. ಕೆಲವು ಯೂನಿವರ್ಸಿಟಿಗಳಿಗೆ ಅವರು ಕೇಳಿದ್ದಕ್ಕಿಂತ ಜಾಸ್ತಿ ಕೊಟ್ಟಿರುವುದೂ ಉಂಟು. ಆದ್ದರಿಂದ ಆ ತರಹದ್ದು ಯಾವುದನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ, ಅದರಲ್ಲಿ ಯಾವುದೇ ರೀತಿಯ ತೊಂದರೆ ಆಗದ ಹಾಗೆ ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಛೇರ್ಮನ್‌ರೇ, ತಾವು ಹೇಳಿದಿರಿ ಈಗ, ಆರ್ಥಿಕ ತೊಂದರೆ ಇಲ್ಲದ ಹಾಗೆ ನಾನು ನೋಡಿಕೊಳ್ಳುತ್ತೇನೆಂದು. ದುರ್ದೈವದಿಂದ ತಾವು ಈಗ ತೆಗೆದು ನೋಡಿ, ನಮ್ಮ ಕರ್ನಾಟಕ ಯೂನಿವರ್ಸಿಟಿಗೆ ಪ್ರತಿ ವರ್ಷ ಒಂದು ಕೋಟಿ, ಒಂದೂವರೆ ಕೋಟಿ, 70 ಲಕ್ಷ, 90 ಲಕ್ಷ, ನೀವು ಏನು ಒಪ್ಪಿಕೊಂಡಿದ್ದೀರಿ ಆ ಹಣದಲ್ಲಿಯೇ ಬಿಡುಗಡೆ ಮಾಡಿದ್ದೀರಿ. ಅಂತರಿಕ ಸಂಪನ್ಮೂಲ ಹೆಚ್ಚು ಮಾಡುವುದಕ್ಕೆ ಹೇಳಿದ್ದೇವೆಂದು ಹೇಳಿದಿರಿ, ಅವರು ಏನು ಮಾಡುತ್ತಿದ್ದಾರೆ ಅಲ್ಲಿ, ಫೀಸ್ ಹೆಚ್ಚಿಗೆ ಮಾಡುತ್ತಿದ್ದಾರೆ. ಯೂನಿವರ್ಸಿಟಿಗೆ ಯಾವ ರೀತಿಯಿಂದ ಆಂತರಿಕ ಸಂಪನ್ಮೂಲ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಿದೆ? ಸರ್ಕಾರಿ ಕಾಲೇಜುಗಳಿಗಿಂತ ಯೂನಿವರ್ಸಿಟಿ ಕಾಲೇಜುಗಳಲ್ಲಿ ಫೀಸ್ ಹೆಚ್ಚಿಗೆ ಮಾಡುತ್ತಾರೆ. ಬಡವರ ಮಕ್ಕಳಿಗೆ ಏನು ಅನುಕೂಲವಾಗುತ್ತದೆ? ಅಂತರಿಕ ಸಂಪನ್ಮೂಲ ಏನು ಹೆಚ್ಚು ಮಾಡಬೇಕೆಂದು ತಾವು ಹೇಳಿ, ನೋಡೋಣ. ಅಂತರಿಕ ಸಂಪನ್ಮೂಲ ಹೆಚ್ಚು ಮಾಡುವಂತಹ ವ್ಯವಸ್ಥೆ ಏನಿದೆ ಎಂದು ಹೇಳಿ ದಯವಿಟ್ಟು, ಸರ್ಕಾರವೇ ನೋಡಿಕೊಳ್ಳಬೇಕು ಅಲ್ಲಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ :– ಮಾನ್ಯ ಛೇರ್ಮನ್‌ರೇ, ಆರ್ಥಿಕ ಸಂಪನ್ಮೂಲ ಬರೀ ಫೀಸ್ ಜಾಸ್ತಿ ಮಾಡುವುದರಿಂದ ಮಾತ್ರವಲ್ಲ, ಹೊಸ ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡುವುದರ ಮೂಲಕ ಅವರು ಆರ್ಥಿಕವಾಗಿ ಸದೃಢರಾಗಲಿಲ್ಲ, ಆದರೆ ಅವರು ಆರ್ಥಿಕ ಸಂಪನ್ಮೂಲಗಳನ್ನು ಕ್ರೂಢೀಕರಣ ಮಾಡುತ್ತಿದ್ದಾರೆ. ನನ್ನ ಹತ್ತಿರ ಅಂಕಿ ಅಂಶಗಳು ಇವೆ. ಬೇರೆ ಯೂನಿವರ್ಸಿಟಿಗಳ ಅಂಕಿ ಅಂಶಗಳನ್ನು ನಾನು ಕಳುಹಿಸಿ ಕೊಡುತ್ತೇನೆ. ಆದರೆ ನಾವೇನು ಒಪ್ಪಿಕೊಂಡಿದ್ದೇವೆ, ಅದರೊಳಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಹಣ ಬಿಡುಗಡೆ ಮಾಡುತ್ತೇವೆ.